# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## -:ವಾರ್ಡ್-37ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-

ದಿನಾಂಕ: 22.03.2021 ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ.37 ಯಶವಂತಪುರ ವಾರ್ಡ್‌ನ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.37ರ ವಾರ್ಡ್ ಕಛೇರಿ, ಮಾಡೆಲ್ ಕಾಲೋನಿ, 2ನೇ ಅಡ್ಡರಸ್ತೆಯ ಕಟ್ಟಡದಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು

ಸಭೆಗೆ ಹಾಜರಿದ್ದ ಮಾನ್ಯ ಸದಸ್ಯರು:-

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಹುದ್ದೆ | ಪದನಾಮ | ಹಾಜರಾತಿ |
|---|---|---|---|---|
| 1 | ಶ್ರೀ ಎನ್. ಜಿ. ಉಮೇಶ್ | ಸ.ಕಾ.ನಿ.ಅ., | ಅಧ್ಯಕ್ಷರು/ ವಾರ್ಡ್ ನೋಡಲ್ ಅಧಿಕಾರಿ | ಹಾಜರಿದ್ದರು |
| 2 | ಎನ್. ಜಿ. ಉಮೇಶ್ | ಸಹಾಯಕ ಅಭಿಯಂತರರು | ಸದಸ್ಯರು | ಹಾಜರಿದ್ದರು |
| 3 | ದಿವ್ಯಾ | ಕೋವಿಡ್ ನೋಡಲ್ ಅಧಿಕಾರಿ | ಸದಸ್ಯರು | ಹಾಜರಿದ್ದರು |
| 4 | ಶ್ರೀಮತಿ ಸುಜಾತಾ | ಹಿರಿಯ ಆರೋಗ್ಯ ಪರಿವೀಕ್ಷಕರು | ಸದಸ್ಯರು | ಹಾಜರಿದ್ದರು |
| 5 | ಲೋಕೇಶ್ | ಬಿ.ಎಲ್.ಒ. ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 6 | ಹರೀಶ್ ಇ. | ಬಿ.ಎಲ್.ಒ. ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 7 | ಸಿದ್ದರಾಮಯ್ಯ | ಮೇಲ್ವಿಚಾರಕರು ಐಸೋಲೇಷನ್ ಟೀಂ | ಸದಸ್ಯರು | ಹಾಜರಿದ್ದರು |
| 8 | ತಿರುಪಾಲ್ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 9 | ಮುರಳಿ | ಮೇಲ್ವಿಚಾರಕರು | ಸದಸ್ಯರು | ಹಾಜರಿದ್ದರು |
| 10 | ಗೌತಮ್ ರಾಜ್ | ಮಾರ್ಷಲ್ | ಸದಸ್ಯರು | ಹಾಜರಿದ್ದರು |
| 11 | ಮುರುಗೇಶ್ ಜಿ. | ಮಾರ್ಷಲ್ | ಸದಸ್ಯರು | ಹಾಜರಿದ್ದರು |

ವಾರ್ಡ್-37ರ ವಾರ್ಡ್ ಸಮಿತಿ ಸಭೆಗೆ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿ ವರ್ಗದವರಿಗೆ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯ ಮಾರ್ಗಸೂಚಿಗಳನ್ನು ಸಭೆಗೆ ಸ್ಥೂಲವಾಗಿ ವಿವರಿಸಿದರು.

ಮಾನ್ಯ ಅಧ್ಯಕ್ಷರು, ಸಭೆಯ ಸದಸ್ಯರುಗಳನ್ನು ಪರಸ್ಪರ ಪರಿಚಯ ಮಾಡಿಸಿ, ಮಾರ್ಗಸೂಚಿಯಂತೆ, ಈ ಕೆಳಗಿನ ವಿಷಯಗಳನ್ನು ಸಭೆಯ ಮುಂದಿಟ್ಟು ವಾರ್ಡ್ ಸಮಿತಿ ಸಭೆಯು ನಿರ್ವಹಿಸಬೇಕಾದ ಅಂಶಗಳನ್ನು ತಿಳಿಸಿ, ಅನುಸರಿಸಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**1) ಆರೋಗ್ಯ :-**

ವಾರ್ಡ್ ವ್ಯಾಪ್ತಿಯಲ್ಲಿ ಒಂದು ಪಾಸಿಟಿವ್ ಹಾಗೂ ಎರಡು ಹೋಂ ಐಸೋಲೇಷನ್ ಕೇಸ್‌ಗಳು ಇರುವುದಾಗಿ ಕೋವಿಡ್ ನೋಡಲ್ ಅಧಿಕಾರಿಯಾದ ದಿವ್ಯಾರವರು ಸಭೆಗೆ ತಿಳಿಸಿದರು. ಅದರಂತೆ, ಅಧ್ಯಕ್ಷರು ಮಾತನಾಡಿ, ಹೋಂ ಐಸೋಲೇಷನ್ ಹಾಗೂ ಪಾಸಿಟಿವ್ ಪ್ರಕರಣಗಳ ಸುತ್ತಮುತ್ತಲು ಬರುವ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕದಲ್ಲಿ ಬರುವ ಸಾರ್ವಜನಿಕರನ್ನು ಗುರುತಿಸಿ, ಸಂಬಂಧಪಟ್ಟ ಟ್ರೇಸಿಂಗ್ ಟೀಂಗಳಿಗೆ ತಿಳಿಸಿ ಹಾಗೂ ಅವರುಗಳಿಗೆ ಕೂಡಲೇ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳುವುದಕ್ಕೆ ಸೂಚನೆಯನ್ನು ನೀಡಲು ಸಭೆಯಲ್ಲಿ ತಿಳಿಸಿದರು.

ಕೋವಿಡ್ ಪರೀಕ್ಷೆಗಳು ಹಾಗೂ ವ್ಯಾಕ್ಸಿನ್ ನೀಡುವ ಪ್ರಕ್ರಿಯೆಯು ವಾರ್ಡ್ ವ್ಯಾಪ್ತಿಯಲ್ಲಿ ಸುಗಮವಾಗಿ ನಡೆಯುತ್ತಿದೆ ಎಂದು ವೈದ್ಯಾಧಿಕಾರಿಗಳ ಪರವಾಗಿ ಸಭೆಗೆ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿದರು.

ಟ್ರೇಸಿಂಗ್ ಟೀಂನ ಮೇಲ್ವಿಚಾರಕರಾದ ಸಿದ್ದರಾಮಯ್ಯರವರು ಸಭೆಯನ್ನುದ್ದೇಶಿಸಿ, ವಾರ್ ರೂಂನಿಂದ ದಿನನಿತ್ಯ ಬರುವ ಕೋವಿಡ್ ಪಾಸಿಟಿವ್ ವ್ಯಕ್ತಿಯ ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕದಲ್ಲಿ ಇರುವ ಸಾರ್ವಜನಿಕರ ಪಟ್ಟಿಯನ್ನು ಆಪ್ ಮೂಲಕ ಕಳುಹಿಸಲಾಗುವುದು. ಅದರಂತೆ, ನಮ್ಮ ತಂಡವು ಪ್ರಾಥಮಿಕ ಮತ್ತು ದ್ವಿತೀಯ ಸಂಪರ್ಕದ ವ್ಯಕ್ತಿಗಳನ್ನು ಗುರುತಿಸಿ, ಅವರುಗಳ ಮಾಹಿತಿಯನ್ನು ಆಪ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು ಎಂದು ಅವರ ಕಾರ್ಯವೈಖರಿಯನ್ನು ಸಭೆಗೆ ವಿವರಿಸಿದರು. ಅದರಂತೆ, ಅಧ್ಯಕ್ಷರು ಮಾತನಾಡಿ, ಅವರ ಕಾರ್ಯಗಳನ್ನು ಶ್ಲಾಘಿಸುತ್ತಾ, ಹಾಗೆಯೇ ಈಗ 2ನೇ ಅಲೆಯು ಹೆಚ್ಚಾಗಿರುವುದರಿಂದ ತಂಡದಲ್ಲಿರುವ ಪ್ರತಿಯೊಬ್ಬರು ತಮ್ಮ ಕಾರ್ಯವನ್ನು ಹೀಗೆಯೇ ಮುಂದುವರೆಸಲು ತಿಳಿಸಿದರು.

**2) ಪೌರ ಕಾರ್ಮಿಕರ ಬಗ್ಗೆ:**

ಹಿಂದಿನ ಸಭೆಯಲ್ಲಿ ಚರ್ಚಿಸಿದಂತೆ, ಐದು ಮಂದಿ ಪೌರ ಕಾರ್ಮಿಕರ ವೇತನ ಪಾವತಿಯಾಗಿರುವುದಿಲ್ಲ ಎಂದು ಮೇಲ್ವಿಚಾರಕರು ಸಭೆಗೆ ತಿಳಿಸಿದರು. ಹಾಗೂ ಪೌರ ಕಾರ್ಮಿಕರು ಕಸ ಸಂಗ್ರಹಿಸುವ ಕಸದ ಆಟೋಗಳಿಗೆ ಕೂಡಲೇ ಧ್ವನಿವರ್ಧಕಗಳನ್ನು ಅಳವಡಿಸಲು ಸೂಚನೆಯನ್ನು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ನೀಡಿದರು. ೮೦ ಕಸದ ಗಾಡಿಗಳನ್ನು ಯಶವಂತಪುರ ವಾರ್ಡಿನ ವ್ಯಾಪ್ತಿಗೆ ಮಂಜೂರು ಮಾಡಲು ಟಿಪ್ಪಣಿಯನ್ನು ಸಿದ್ಧಪಡಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಿದರು.

**3) ಬೀದಿ ಬದಿ ವ್ಯಾಪಾರಿಗಳ ತೆರವುಗೊಳಿಸುವ ಬಗ್ಗೆ:-**

ಯಶವಂತಪುರ 1ನೇ ಮುಖ್ಯರಸ್ತೆ ಹಾಗೂ ಬಜಾರ್ ಸ್ಟ್ರೀಟ್ ರೋಡಲ್ಲಿ ಬೀದಿ ಬದಿ ವ್ಯಾಪಾರಿಗಳು ರಸ್ತೆ ಬದಿಯಲ್ಲಿ ತಮ್ಮ ತಳ್ಳುವ ಗಾಡಿಗಳನ್ನು ಇಟ್ಟು ವ್ಯಾಪಾರವನ್ನು ಮಾಡುತ್ತಿರುವುದರಿಂದ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ಕೂಡಲೇ ವ್ಯಾಪಾರಿಗಳನ್ನು ತೆರವುಗೊಳಿಸಲು ಸಭೆಯಲ್ಲಿ ಹಾಜರಿದ್ದ ಮಾರ್ಷಲ್, ಮೇಲ್ವಿಚಾರಕರು ಹಾಗೂ ಗ್ಯಾಂಗ್‌ಮ್ಯಾನ್‌ಗಳಿಗೆ ತಿಳಿಸಿದರು. ಟ್ರಾಫಿಕ್ ಪೋಲಿಸ್ ರವರಿಂದ ಬೆಳಗ್ಗೆ ೮ ರಿಂದ ಮಧ್ಯಾಹ್ನ 1.00 ರವರೆಗೆ ಜನ ಹಾಗೂ ವಾಹನ ದಟ್ಟಣೆ ನಿಯಂತ್ರಿಸಲು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ಸಭೆಯಲ್ಲಿ ಹಾಜರಿದ್ದ ಹಿರಿಯ ಆರೋಗ್ಯ ಪರಿವೀಕ್ಷಕರು ಹಾಗೂ ಮೇಲ್ವಿಚಾರಕರು ಸಭೆಗೆ ತಿಳಿಸಿದರು. ಅದರಂತೆ, ಅಧ್ಯಕ್ಷರು ಮಾತನಾಡಿ ಕೂಡಲೇ ಟ್ರಾಫಿಕ್ ಪೋಲಿಸ್ ರವರ ಗಮನಕ್ಕೆ ತರುವುದಾಗಿ ಸಭೆಗೆ ತಿಳಿಸಿದರು.

**4) ಕಂದಾಯ ಇಲಾಖೆ:**

ಕಂದಾಯ ವಸೂಲಿಗಾರರು ಮಾತನಾಡಿ, ವಾರ್ಡ್‌ನಲ್ಲಿ ಒಟ್ಟು 86.75 ಲಕ್ಷಗಳ ಕಂದಾಯವು ಬಾಕಿ ಇರುವುದಾಗಿ ಸಭೆಗೆ ತಿಳಿಸಿದರು, ಈ ವಾರ ಯಶವಂತಪುರ ವಾರ್ಡ್ ವ್ಯಾಪ್ತಿಯಲ್ಲಿ ಮೂರು ಲಕ್ಷಗಳ ಕಂದಾಯವು ವಸೂಲಿ ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸದರು.

**5) ಬೆಸ್ಕಾಂ:-**

ವಾರ್ಡ್‌ನ ವಿವಿಧೆಡೆ ಸಾರ್ವಜನಿಕ ಬೋರ್‌ವೆಲ್, ಶುದ್ಧ ಕುಡಿಯುವ ನೀರಿನ ಘಟಕ, ಸಮುದಾಯ ಭವನ, ಬಿಬಿಎಂಪಿ ಆಸ್ಪತ್ರೆಗಳಲ್ಲಿ ವಿದ್ಯುತ್ ಮೀಟರ್‌ಗಳನ್ನು ಅಳವಡಿಸಲಾಗಿದ್ದು, ಇದರ ಬಿಲ್ಲಿನ ಮೊತ್ತದ ಕಡತವನ್ನು ಕೂಡಲೇ ಸಿದ್ಧಪಡಿಸಿ, ಸಂಬಂಧಪಟ್ಟ ಗುತ್ತಿಗೆದಾರರು ಅತೀ ಜರೂರಾಗಿ ಸಹಾಯಕ ಅಭಿಯಂತರರಿಗೆ ನೀಡಲು ಸಭೆಯಲ್ಲಿ ತಿಳಿಸಿದರು.

**6) ಬಿಡಬ್ಲ್ಯೂಎಸ್‌ಎಸ್‌ಬಿ :**

ವಾರ್ಡ್ ವ್ಯಾಪ್ತಿಯಲ್ಲಿ ಸ್ಯಾನಿಟರಿ ಪೈಪ್ ರಿಪೇರಿ ಕಾರ್ಯ ಮಾಡುವಾಗ ರಸ್ತೆ ಅಗೆತ ಮಾಡುತ್ತಿರುವುದು ಕಂಡುಬಂದಿರುತ್ತದೆ. ಬಿಡಬ್ಲ್ಯೂಎಸ್‌ಎಸ್‌ಬಿ ಕೆಲಸಗಾರರು ರಸ್ತೆ ಅಗೆತಕ್ಕೆ ಬಿಬಿಎಂಪಿಯ ಅನುಮತಿ ಪತ್ರವು ಇಲ್ಲದಿದ್ದರೂ ರಸ್ತೆ ಅಗೆತವನ್ನು ಸ್ವತ: ಬಿಡಬ್ಲ್ಯೂಎಸ್‌ಎಸ್‌ಬಿ ಕೆಲಸಗಾರರೇ ಮಾಡಿ ಪಾಲಿಕೆಯ ರಸ್ತೆಗಳನ್ನು ಹಾಳು ಮಾಡುತ್ತಿರುವುದು ಕಂಡುಬಂದಿರುತ್ತದೆ. ಅದರಂತೆ, ಸಭೆಗೆ ಹಾಜರಿದ್ದ ಪರಿವೀಕ್ಷಕರಿಗೆ ಮಾನ್ಯ ಅಧ್ಯಕ್ಷರು ಅನುಮತಿ ಪತ್ರವಿಲ್ಲದೇ ಯಾವುದೇ ರಸ್ತೆ ಅಗೆತವನ್ನು ಮಾಡದಿರುವುದಾಗಿ ಸೂಚಿಸಿದರು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಸಾರ್ವಜನಿಕ ದೂರುಗಳು ಬಿಡಬ್ಲ್ಯೂಎಸ್‌ಎಸ್‌ಬಿ ಇಲಾಖೆಗೆ ಬರುತ್ತಿರುವುದು ಅಧ್ಯಕ್ಷರ ಗಮನಕ್ಕೆ ಬಂದಿರುತ್ತದೆ. ಅದರಂತೆ ದೂರುಗಳನ್ನು ಅತೀ ಜರೂರಾಗಿ ಪೂರ್ಣಗೊಳಿಸಲು ಸೂಚಿಸಿದರು.

**7) ಮಾರ್ಷಲ್**

ಸಭೆಗೆ ಹಾಜರಿದ್ದ ಮಾರ್ಷಲ್‌ಗಳು ಮಾತನಾಡಿ, ಮಾಸ್ಕ್ ಹಾಕದೇ ಇರುವ ಸಾರ್ವಜನಿಕರಿಗೆ 250 ದಂಡ ಹಾಗೂ ಕಸವನ್ನು ಬೇರ್ಪಡಿಸದೇ ಎಸೆಯುವ ಸಾರ್ವಜನಿಕರಿಗೆ 500 ರೂ.ದಂಡಗಳನ್ನು ವಾರ್ಡ್ ವ್ಯಾಪ್ತಿಯಲ್ಲಿ ವಿಧಿಸಲಾಗುವುದು ಎಂದು ತಿಳಿಸಿದರು. ಹಾಗೂ ಇಂದಿರಾ ಕ್ಯಾಂಟೀನ್‌ನಲ್ಲಿ ಕ್ವಾಲಿಟಿ ಊಟವು ಬರುತ್ತಿಲ್ಲ, ಇಂಡೆಂಟ್ 400 ಇದ್ದರೂ, ಕೇವಲ 150 ರಿಂದ 200 ಜನರಿಗಾಗುವಷ್ಟು ಮಾತ್ರ ಬರುತ್ತಿರುತ್ತದೆ. ಮಿಕ್ಕುಳಿದ ಜನರಿಗೆ ಕಡಿಮೆಯಾಗಿರುವುದು ಕಂಡುಬಂದಿದೆ ಹಾಗೂ ಗ್ಲೌಸ್, ಕ್ಲೀನಿಂಗ್ ಐಟಂಗಳನ್ನು ಕೊಡುವುದಿಲ್ಲವೆಂದು ಕ್ಯಾಂಟೀನ್‌ನ ಸಿಬ್ಬಂದಿಗಳು ತಿಳಿಸಿರುವುದಾಗಿ ಮಾರ್ಷಲ್ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು ಅಧ್ಯಕ್ಷರಲ್ಲಿ ತಿಳಿಸಿರುತ್ತಾರೆ. ಅದರಂತೆ, ಅಧ್ಯಕ್ಷರು ಮಾತನಾಡಿ, ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸುವುದಾಗಿ ಭರವಸೆ ನೀಡಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ
ವಾರ್ಡ್ ಸಂಖ್ಯೆ:37

(ಎಸ್. ಜಿ. ಉಮೇಶ್)
[illegible]
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:37

Asst. Executive Engineer
Yeshwanthpur Sub-Division
Bruhat Bangalore Mahanagara Palike